ಕನ್ನಡಪ್ರಭ
July 23, 2005

Subscribe to Malayalam Varika's Online Edition
INR 249 per annum



Saturday July 23 2005 00:00 IST

# ಇಂಟರ್‌ನೆಟ್‌ನಲ್ಲಿ ಕನ್ನಡ ವಿಕಿಪೀಡಿಯ (ನೆಟ್ ಮಾಹಿತಿ)

**–ಡಾ। ಎಂ.ಎಸ್. ಶ್ರೀಧರ್**

ಕನ್ನಡದಲ್ಲೊಂದು ವಿಕಿಪೀಡಿಯ (http://kn.wikipedia.org), ಅಂದರೆ ಮುಕ್ತ ಇ–ವಿಶ್ವಕೋಶ, ಬಹು–ಭಾಷಾ ವಿಕಿಪೀಡಿಯಾದ (http:/en.wikipedia.org) ಒಂದು ಭಾಗವಾಗಿ ಇಂಟರ್‌ನೆಟ್‌ನಲ್ಲಿ ಬೆಳೆಯುತ್ತಿದೆ. ಇದರಲ್ಲಿ ಹಲವಾರು ಪ್ರಮುಖ ಕನ್ನಡ ಸಾಹಿತಿಗಳ ಪರಿಚಯವನ್ನು ಒಳಗೊಂಡಂತೆ ಸುಮಾರು ೯೯೦ ಲೇಖನಗಳಿವೆ. Wikimedia Foundation Inc., (Florida, USA) ಎಂಬ ಲಾಭೋದ್ದೇಶವಿಲ್ಲದ ಸೇವಾ ಸಂಸ್ಥೆ ಮೊದಲಿಗೆ ಇಂಗ್ಲಿಷ್ ವಿಕಿಪೀಡಿಯವನ್ನು ಜಿಮ್ಮಿ ವೇಲರ್ ಮತ್ತು ಲ್ಯಾರಿ ಸಿಂಗರ್ ಎಂಬುವವರ ಮೀಡಿಯಾ ವಿಕಿ ತಂತ್ರಾಂಶವನ್ನು ಬಳಸಿ ಜನವರಿ ೧೫, ೨೦೦೧ ರಂದು ಆರಂಭಿಸಿತು. ಇಂದು ವಿಕಿಪೀಡಿಯ ಸುಮಾರು ೨೦೦ ಭಾಷೆಗಳಲ್ಲಿ ರೂಪುಗೊಂಡಿದೆ. ಇದರಲ್ಲಿ ಒಟ್ಟು ಸುಮಾರು ೧೩ ಲಕ್ಷ ಲೇಖನಗಳಿದ್ದು ಅವುಗಳಲ್ಲಿ ೮ ಲಕ್ಷ ಲೇಖನಗಳು ಇಂಗ್ಲೀಷೇತರ ಭಾಷೆಗಳಲ್ಲಿವೆ. ಪ್ರತಿದಿನ ಸುಮಾರು ೨೫೦೦ ಲೇಖನಗಳು ಸೇರ್ಪಡೆಯಾಗಿ, ೨೫,೦೦೦ ಲೇಖನಗಳ ಪರಿಷ್ಕರಣೆ ನಡೆಯುತ್ತಿದೆ. ಐವತ್ತು ಸಾವಿರಕ್ಕೂ ಹೆಚ್ಚು ಲೇಖನ ಹೊಂದಿರುವ ಮೊದಲ ಸ್ಥಾನಗಳಲ್ಲಿ ಐರೋಪ್ಯ ಭಾಷೆಗಳೊಂದಿಗೆ ಜಪಾನಿ ಸೇರಿರುವುದು ಒಂದು ವೈಶಿಷ್ಟ್ಯವಾದರೆ, ನಂತರದ ೧೦,೦೦೦ಕ್ಕೂ ಹೆಚ್ಚು ಲೇಖನ ಇರುವ ವಿಕಿಪೀಡಿಯಾಗಳ ಗುಂಪಿನಲ್ಲಿ ಜೀನಿ ಭಾಷೆ ಇರುವುದು ಇನ್ನೊಂದು ವೈಶಿಷ್ಟ್ಯ. ಸಾವಿರಕ್ಕೂ ಹೆಚ್ಚು ಲೇಖನಗಳನ್ನು ಹೊಂದಿರುವ ಭಾಷೆಗಳ ವಿಕಿಪೀಡಿಯ ಗುಂಪಿನಲ್ಲಿ ಹಿಂದಿ ಮತ್ತು ಸಂಸ್ಕೃತ ಸೇರಿವೆ. ಸಂತಸದ ಸಂಗತಿಯೆಂದರೆ ಸದ್ಯದಲ್ಲೇ ಕನ್ನಡ ವಿಕಿಪೀಡಿಯಾದ ಲೇಖನಗಳ ಸಂಖ್ಯೆ ೧೦೦೦ದ ಗಡಿ ದಾಟಲಿದೆ. ಅಲ್ಲದೆ ಇತರ ಭಾರತೀಯ ಭಾಷೆಗಳಾದ ತಮಿಳು, ಗುಜರಾತಿ, ಮರಾಠಿ, ಕಾಶ್ಮೀರಿ ಮತ್ತು ಉರ್ದುಗಳಲ್ಲೂ ವಿಕಿಪೀಡಿಯಗಳು ಆರಂಭವಾಗಿವೆ. ಎಲ್ಲಾ ಭಾಷೆಗಳ ವಿಕಿಪೀಡಿಯಗಳ ತಾಂತ್ರಿಕ ಅವಶ್ಯಕತೆಗಳನ್ನು, ಅಂದರೆ ಸರ್ವರ್, ಡೊಮೇನ್ ನೇಮ್, ಟ್ರೇಡ್ ನೇಮ್, ತಂತ್ರಾಂಶ, ಇತ್ಯಾದಿ ಪೂರೈಸುವ ಹೊಣೆಯನ್ನು ವಿಕಿ ಮೀಡಿಯಾ ಫೌಂಡೇಶನ್ ಹೊತ್ತಿದೆ.

ಕನ್ನಡ ವಿಕಿಪೀಡಿಯಾದ ಪ್ರಯೋಜನ ಮತ್ತು ಅದರ ಅಭಿವೃದ್ಧಿಗೆ ಹೇಗೆ ನೆರವಾಗಬ

**Karnataka fixes fees for professional courses**

ದೀಪಾವಳಿ ವಿಶೇಷಾಂಕ

ಗೆದ್ದ ಶಾಸಕರು

ಮಹಿಳೆಯ ಆಸ್ತಿ ಹಕ್ಕು

'ಸಂವಿಧಾನೇತರ ಅಧಿಕಾರ' (ಕಿಡಿನುಡಿ)

ನೀರಾವರಿ ನೀರು: ಬಳಕೆಯ ವೈಫಲ್ಯ

ಜನನಾಡಿ (ಸಂಪಾದಕರಿಗೆ ಪತ್ರ)

ಚಾಣಕ್ಯ ನೀತಿ

**Your Verdict**

Jharkhand police has been entrusted the job of monitoring children's health in rural areas. Is this a wise decision?

Yes
No
Can't Say

Submit

ಹುದು ಎಂಬುದನ್ನು ತಿಳಿಯುವ ಮುನ್ನ ವಿಕಿಪೀಡಿಯಾಗಳ ಹಿನ್ನಲೆ ತಿಳಿಯುವುದು ಸೂಕ್ತ.ವಿಕಿಪೀಡಿಯಾ ಎಂಬುದು ವಿಕಿ ಮತ್ತು ಎನ್‌ಸೈಕ್ಲೋಪೀಡಿಯಾ ಎಂಬೆರಡು ಪದಗಳ ಸಂಯೋಜನೆಯಿಂದ ಹುಟ್ಟಿದ ಪದ (ವಿಕಿಎಂಬುದು ಗ್ರಾಹಕರು ವೆಬ್ ಬ್ರೌಸರ್ ಬಳಸಿ ಸುಲಭದಲ್ಲಿ ವೆಬ್ ತಾಣಗಳಿಗೆ ಪುಟಗಳನ್ನು ಸೇರಿಸುವ ಮತ್ತು ಪರಿಷ್ಕರಿಸುವ ವ್ಯವಸ್ಥೆ ಅಥವ ಸರಳೀಕರಿಸಿದ ಆನ್‌ಲೈನ್ ದತ್ತಾಂಶ). ವಿಕಿಪೀಡಿಯ ಸದಾಕಾಲ ಇಂಟರ್‌ನೆಟ್‌ನಲ್ಲಿ ಲಭ್ಯವಿರುವ ಮತ್ತು ನಿತ್ಯ ಬೆಳೆಯುತ್ತಿರುವ ಒಂದು ಮುಕ್ತ ಆನ್‌ಲೈನ್ ವಿಶ್ವಕೋಶ. ಇದರಲ್ಲಿ ಲೇಖನ ಬರೆಯುವ ನಿಗದಿತ ಲೇಖಕರಾಗಲಿ, ಸಂಬಳ ಪಡೆದು ಕಾರ್ಯ ನಡೆಸುವ ನೌಕರರಾಗಲಿ ಇಲ್ಲ. ಅಷ್ಟೇ ಏಕೆ ಮುಖ್ಯ ಸಂಪಾದಕರೂ ಇಲ್ಲ. ವಿಕಿ ಮೀಡಿಯಾ ಫೌಂಡೇಶನ್ ಆರಂಭಿಸಿ ತ ನ್ನ ತಾಣದಲ್ಲಿ ಪೋಷಿಸುತ್ತಿರುವ ವಿಕಿಮೀಡಿಯ ವಿಶ್ವಾದ್ಯಂತ ಸಾವಿರಾರು ಓದಗ–ಸ್ವಯಂಸೇವಕರ ಸಹಕಾರದೊಂದಿಗೆ ಬೆಳೆಯುತ್ತಿದೆ. ಇಂತಹ ಸ್ವಯಂಸೇವಕರು ಬ ರೆದು, ಪ್ರಕಟಿಸಿ, ತಿದ್ದಿ (ಸಂಪಾದಿಸಿ)ದ ಈ ವಿಶ್ವಕೋಶ ಇಂಟರ್‌ನೆಟ್‌ನಲ್ಲಿ ಪುಕ್ಕಟೆ ಲಭ್ಯವಿದೆ.

ಒಟ್ಟಿನಲ್ಲಿ ವಿಕಿಪೀಡಿಯ ಇಂಟರ್‌ನೆಟ್‌ನಲ್ಲಿ ದೊರೆಯುವ ಮುಕ್ತ ವಿಶ್ವಕೋಶ ಮತ್ತಿತ ರ ಪರಾಮರ್ಶನ ಗ್ರಂಥಗಳ ಒಂದು ಬೃಹತ್ ಸಮೂಹ. ಅವಶ್ಯಕ ಜ್ಞಾನವನ್ನು ಒಂದೆಡೆ ಕ್ರೋಡೀಕರಿಸಿ ವಿವಿಧ ಭಾಷೆಗಳಲ್ಲಿ ಎಲ್ಲರಿಗೂ ಸುಲಭದಲ್ಲಿ ದೊರೆಯುವಂತೆ ಮಾಡುವ ಮಹತ್ವಾಕಾಂಕ್ಷೆಯೊಂದಿಗೆ ಬೆಳೆಯುತ್ತಿರುವ ಯೋಜನೆ. ಈ ಸಂಸ್ಥೆಯ ಇತರ ಸೋದರ ಯೋಜನೆಗಳೆಂದರೆ ವಿಕ್ಷನರಿ (ಮುಕ್ತ ಶಬ್ದಕೋಶ), ವಿಕಿಬುಕ್ಸ್ (ಮುಕ್ತ ಪಠ್ಯ ಪುಸ್ತಕಗಳು ಮತ್ತು ಕೈಪಿಡಿಗಳು/ ಪ್ರಯೋಗ ಪುಸ್ತಕಗಳು), ವಿಕಿಕೋಟ್ಸ್ (ಮುಕ್ತ ಉಲ್ಲೇಖನ ವಿಶ್ವಕೋಶ), ವಿಕಿನ್ಯೂಸ್ (ಮುಕ್ತ ಸುದ್ದಿ ವಾರ್ತೆ ಗಳು), ವಿಕಿಸ್ಪಿಶೀಸ್ (ಜೈವಿಕ ಪ್ರಬೇಧಗಳ ಬಗ್ಗೆ ಮುಕ್ತ ಮಾಹಿತಿ), ವಿಕಿ ಮೀಡಿಯಾ ಕಾಮನ್ಸ್ (ಧ್ವನಿ ಮುದ್ರಿಕೆ, ಸ್ಥಿರ ಹಾಗೂ ವೀಡಿಯೊ ಚಿತ್ರ, ಪಠ್ಯ ಇತ್ಯಾದಿಗಳ ಮುಕ್ತ ಕೇಂಗ್ರ ಕಣಜ), ವಿಕಿ ಸೋರ್ಸ್ (ಸಾರ್ವಜನಿಕವಾಗಿ ಲಭ್ಯವಿರುವ ಮೂಲ ಪಠ್ಯದ ಮುಕ್ತ ಆಗರ) ಮತ್ತು ಮೆಟಾ ವಿಕಿ (ವಿಕಿಮೀಡಿಯಾ ಪ್ರಾಜೆಕ್ಟ್ ಸಂಯೋಜನೆ).

ಕನ್ನಡದಲ್ಲಿ ಈವರೆಗೆ ವಿಕಿಪೀಡಿಯ ಮತ್ತು ಇತ್ತೀಚೆಗೆ ೨೦೦೪ರ ನವೆಂಬರ್ ೧ ರಿಂದ ಆರಂಭವಾದ ಕನ್ನಡ ವಿಕ್ಷನರಿ (http://kn.wiktionary.org) ಮಾತ್ರ ಇವೆ. ಮುಕ್ತ ಶಬ್ದಕೋಶ ಇನ್ನೂ ಶೈಶವಾವಸ್ಥೆಯಲ್ಲಿದ್ದು ಕೇವಲ ೩೬ ಪುಟ ಇದೆ. ಇದರ ಬೆಳವ ಣಿಗೆಗೆ ಎಲ್ಲರ ಸಹಕಾರ, ಸಹಭಾಗಿತ್ವದ ಅಗತ್ಯವಿದೆ. ಇಂಗ್ಲಿಷ್ ಭಾಷೆಯ ವಿಭಾಗದಲ್ಲಿ ಮೇಲೆ ತಿಳಿಸಿದ ಲೇಖನಗಳಲ್ಲದೆ ೭೦೦೦ ಪುಸ್ತಕಗಳು, ೬೦೦೦೦ ಪದಗಳ ಅರ್ಥವಿವರಣೆ ಮತ್ತು ೧೨೦೦೦ ಪುಟಗಳ ಮೂಲಪಠ್ಯ ಇತ್ಯಾದಿ ಇವೆ. ಈ ಎಲ್ಲಾ ಆನ್‌ಲೈನ್ ಪರಾಮರ್ಶನ ಗ್ರಂಥಗಳನ್ನು ಇಂಟರ್‌ನೆಟ್‌ನಲ್ಲಿ ಹಲವಾರು ಇತ ರ ತಾಣಗಳೂ ಪ್ರತಿರೂಪಿಸುವ/ ಪ್ರತಿಬಿಂಬಿಸುವ ವ್ಯವಸ್ಥೆ ಇದೆ. ಇವುಗಳನ್ನು ಯಾರು ಬೇಕಾದರೂ ಸುಲಭದಲ್ಲಿ ಉಪಯೋಗಿಸಬಹುದಾಗಿದೆ ಮತ್ತು ಬೇಕೆನಿಸಿದ್ದನ್ನು ತಮ್ಮ ಕಂಪ್ಯೂಟರ್‌ಗೆ ವರ್ಗಾಯಿಸಿಕೊಳ್ಳಬಹುದಾಗಿದೆ.

ವಿಕಿ ಮೀಡಿಯಾ ಫೌಂಡೇಶನ್ ಮುಕ್ತ ತಂತ್ರಾಂಶ ಮತ್ತು ಇಂಟರ್‌ನೆಟ್ ಬಳಸಿ ಇಂತಹ ಯೋಜನೆಯನ್ನು ಸಾಕಾರಗೊಳಿಸಿದೆಯಾದರೂ ಆಯಾ ಭಾಷೆಯ ಸ್ವಯಂ

ಸೇವಕರ ಕೊಡುಗೆ ಅಪಾರವಾದುದು. ವಿಕಿಪೀಡಿಯಾಗಳಿಗೆ ಲೇಖನ ಬರೆದು ಸೇರಿಸುವ, ಪರಿಷ್ಕರಿಸುವ ಮತ್ತು ಸಂಪಾದಿಸುವ ಸ್ವಯಂಸೇವಕರಾಗಿ ಈ ಸಂಸ್ಥೆ ಕೆಲವು ನಿಯಮಗಳು ಮತ್ತು ಮಾರ್ಗದರ್ಶನಗಳನ್ನು ರೂಪಿಸಿದೆ. ಓದುಗರು ಮಾಡಿದ
ಪರಿಷ್ಕರಣೆ ಬೇಡವಾದರೆ ಸುಲಭದಲ್ಲಿ ಬದಲಾವಣೆಗಳನ್ನು ಹಿಂತೆಗೆಯುವ (ಅಂದರೆ ಹಿಂದಿನ ಆವೃತ್ತಿಗೆ ಸುಲಭದಲ್ಲಿ ಹಿಂದಿರುಗುವ), ಪೂರ್ವಗ್ರಹ ಪೀಡಿತವಾದ ಬ ರಹಗಳನ್ನು ನಿಷ್ಪರಿಣಾಮಗೊಳಿಸುವ, ವಿವಾದಾತ್ಮಕ ಬರವಣಿಗೆಗಳನ್ನು ಗುರುತು ಮಾಡಿ ನಿಷ್ಕ್ರಿಯಗೊಳಿಸಿ, ವಿವಾದ ಬಗೆಹರಿಸುವ ಹಾಗೂ ಅಂತಹವನ್ನು ಈ ಕಾರ್ಯದಿಂದ ಹೊರಗಿಡುವ ಪರಿಣಾಮಕಾರಿಯಾದ ವ್ಯವಸ್ಥೆ ಇದೆ.
ವಿಪುಲ ಹೈಪರ್‌ಲಿಂಕ್ (ಆಂತರಿಕ ಸಂಪರ್ಕ) ಹೊಂದಿರುವುದಲ್ಲದೆ ವಿಕಿಪೀಡಿಯ ಇತರ ಪರಾಮರ್ಶನ ಗ್ರಂಥಗಳಿಗೂ ಸಂಪರ್ಕ ಕಲ್ಪಿಸಿದೆ. ಇಂಟರ್‌ನೆಟ್‌ನ ಹಲವಾರು ತಾಣಗಳು ವಿಕಿಪೀಡಿಯಾಕ್ಕೆ ಸಂಪರ್ಕ ಕಲ್ಪಿಸಿವೆ ಮತ್ತು ಶೋಧಯಂತ ್ರಗಳು ಸಂಬಂಧಿಸಿದ ಲೇಖನಗಳನ್ನು ಮತ್ತು ಅವುಗಳ ಭಾಗವನ್ನು ಕೂಡಲೇ ಹುಡುಕಿ ತೆಗೆಯುತ್ತವೆ. ಇಂಗ್ಲಿಷ್ ಬಳಸಿ ಹುಡುಕಿದರೂ ಕನ್ನಡ ಲೇಖನಗಳು ದೊರೆಯುವಂತೆ ಇಂಗ್ಲಿಷ್ ಸೂಚಿಪದಗಳನ್ನು ಅಳವಡಿಸಲಾಗಿದೆ. ವಿಕಿಪೀಡಿಯ ಹುಡುಕಲು ಗೂಗಲ್ ಪರಿಣಾಮಕಾರಿ ಯಂತ್ರ. ಕನ್ನಡ ವಿಕಿಪೀಡಿಯ ತೆರೆದ ಕೂಡಲೆ ಪ್ರಚಲಿತ ಸುದ್ದಿ, ವಿಶೇಷ ಬರಹ, ಹೊಸ ಲೇಖನಗಳ ಪಟ್ಟಿ, ನಿಮಗಿದು ಗೊತ್ತೆ?, ಇತ್ಯಾದಿಗಳನ್ನು ಹೊಂದಿರುವ ಮುಖಪುಟ ಎದುರಾಗುತ್ತದೆ. ಅಲ್ಲಿಂದ ಆಯಾ ವಿಭಾಗಕ್ಕೆ ಸಂಪರ್ಕ ಕಲ್ಪಿಸಲಾಗಿದೆ. ಕನ್ನಡ ಲೇಖನಗಳನ್ನು ಸಂಸ್ಕೃತಿ, ಭೂಗೋಳ, ಇತಿಹಾಸ, ವಿಜ್ಞಾನ ಮತ್ತು ತಂತ್ರಜ್ಞಾನ, ರಾಜಕೀಯ, ಸಮಾಜ ಮತ್ತು ಜೀವನ ಎಂಬ ಆರು ಸ್ಥೂಲ ವರ್ಗಗಳಲ್ಲಿ ವಿಂಗಡಿಸಿದೆ. ಅಕಾರಾದಿ ಪಟ್ಟಿಯ ಮೂಲಕವು ಲೇಖನಗಳನ್ನು ತೆರೆದು ಪರಿಶೀಲಿಸಬಹುದು. ಕುತೂಹಲಕ್ಕೆ ತೆರೆದ ಎಸ್.ಎಲ್ ಭೈರಪ್ಪನವರ ಬಗೆಗಿನ ಲೇಖನ ಅವರ ಸಂಕ್ಷಿಪ್ತ ಪರಿಚಯ, ಕೃತಿಗಳ ಪೂರ್ಣ ಪಟ್ಟಿ ಹೊಂದಿದ್ದು ಚೊಕ್ಕವಾಗಿದೆ. (ಅವರ ಚಿತ್ರವೊಂದನ್ನು ಅಳವಡಿಸಿದ್ದರೆ ಚೆನ್ನಾಗಿತ್ತು. ಆದರೆ ಯಾವಾಗಲಾದರೂ ಯಾರು ಬೇಕಾದರೂ ಸಲಹೆ ನೀಡಿ ಚಿತ ್ರವನ್ನು ಸೇರಿಸಬಹುದಾಗಿರುವುದೇ ಈ ಮುಕ್ತ ವಿಶ್ವಕೋಶದ ವಿಶೇಷ). ಆಶ್ಚರ್ಯ ವೆಂದರೆ ಆರ್ಯಭಟ ಮತ್ತು ಇನ್ಸಾಟ್ ಉಪಗ್ರಹಗಳ ಬಗ್ಗೆ ಸಚಿತ್ರ ಲೇಖನಗಳಿವೆ. ಮತ್ತು ಇತರ ಉಪಯುಕ್ತ ಇಂಟರ್‌ನೆಟ್ ತಾಣಗಳಿಗೆ ಸಂಪರ್ಕ ಕಲ್ಪಿಸಲಾಗಿದೆ. ಯಾದೃಚ್ಛಿಕ ಪುಟದಲ್ಲಿ ಕರ್ನಾಟಕದ ಜಿಲ್ಲಾವಾರು ಸಂಕ್ಷಿಪ್ತ ಮಾಹಿತಿ, ಅಂಕಿ ಅಂಶ, ಚಿತ್ರಗಳು, ಚರಿತ್ರೆ, ಪ್ರವಾಸಿ ತಾಣಗಳು, ಪ್ರಮುಖ ವ್ಯಕ್ತಿಗಳು, ತಾಲ್ಲೂಕುವಾರು ಅಂಕಿ ಅಂಶ ಮತ್ತು ಇತರ ತಾಣಗಳಿಗೆ ಸಂಪರ್ಕ ಇವೆ.
ವಿಕಿಪೀಡಿಯ ಟೀಕಾತೀತವೇನಲ್ಲ. ಲೇಖನಗಳ ಗುಣಮಟ್ಟ ಕಾಯ್ದುಕೊಳ್ಳುವ ಅಧಿಕೃತತೆ ಇಲ್ಲ, ಮಾಹಿತಿ ನಂಬಲರ್ಹವಲ್ಲ. ಇದು ಪರಾಮರ್ಶನ ಗ್ರಂಥವೇ ಅಲ್ಲ, ಪೂರ್ವಗ್ರಹಪೀಡಿತ ವಿಷಯಗಳ ಮತ್ತು ಉದ್ದನೆಯ ಲೇಖನಗಳಿವೆ. ಲೇಖನದಿಂದ ಲೇಖನಕ್ಕೆ ಗಣನೀಯ ಗುಣಮಟ್ಟ ಬದಲಾವಣೆ ಇದೆ, ವಿಪುಲ ಸಂಪರ್ಕಗಳಿಂದಾಗಿ ಗೂಗಲ್‌ನಲ್ಲಿ ಒಳ್ಳೆಯ ರ್‍ಯಾಂಕ್ ಪಡೆದಿದೆ, ಇತ್ಯಾದಿ ಟೀಕೆಗಳನ್ನು ಹೆಚ್ಚಾಗಿ

ಸಾಂಪ್ರದಾಯಿಕ ಪ್ರಕಾಶಕರು ಮತ್ತು ಗ್ರಂಥಪಾಲಕರು ಮಾಡಿದ್ದಾರೆ.
ವಿಕಿಪೀಡಿಯಾದಂತಹ ಮುಕ್ತ ಆನ್‌ಲೈನ್ ವಿಶ್ವಕೋಶ ಮತ್ತಿತರ ಪರಾಮರ್ಶನ ಗ್ರಂಥಗಳಿಂದ ತಮ್ಮ ವೃತ್ತಿಗೆ ಮತ್ತು ಲಾಭಕ್ಕೆ ಮುಳುವಾಗಬಹುದೆಂಬ ಭಯ ಈ ಟೀಕೆಗಳ ಹಿಂದೆ ಇರುವ ಸಾಧ್ಯತೆಗಳಿವೆ. ವಿಕಿಪೀಡಿಯಾದಿಂದ ತನಗೆ ಯಾವ ಭಯವು ಇಲ್ಲ ಎಂದು ಎನ್‌ಸೈಕ್ಲೋಪೀಡಿಯಾ ಬ್ರಿಟಾನಿಕಾ) ಹೇಳಿಕೊಂಡಿದೆ.
ವಾಸ್ತವದಲ್ಲಿ ಹೆಚ್ಚು ಸ್ವಾತಂತ್ರ್ಯವುಳ್ಳ ಲೇಖಕರಿಂದ ಮತ್ತು ವಿವಿಧ ಸಂಪನ್ಮೂಲಗಳಿಂದ ಮಾಹಿತಿ ಪಡೆದು, ಜನಪ್ರಿಯ ವಿಶ್ವಕೋಶಗಳಲ್ಲಿ ದೊರೆಯುವ ಎಷ್ಟೋ ವಿಷಯಗಳ ಬಗೆಗೂ ಲೇಖನಗಳನ್ನು ಪ್ರಕಟಿಸಿ ಸದಾ ಪರಿಷ್ಕರಣೆಗೊಂಡು ಗುಣಮಟ್ಟ ವೃದ್ಧಿಸಿಕೊಳ್ಳುತ್ತಲೇ ಹಲವಾರು ಮಹತ್ವದ ವೈಜ್ಞಾನಿಕ ನಿಯತ ಕಾಲಿಕೆಗಳಲ್ಲೂ ಉದ್ಧರಿಸಿಕೊಂಡು ಸಿಟೇಶನ್ (ಫಲಕ) ಪಡೆದು) ೨೦೦೪ರಲ್ಲಿ ಜಾಗತಿಕ ಮಟ್ಟದ ಎರಡು ಬಹುಮಾನ ಗಳಿಸಿ, ಮಾಧ್ಯಮಗಳ ಹೊಗಳಿಕೆಗೆ ಪಾತ್ರವಾಗಿರುವ ವಿಕಿಪೀಡಿಯ ಟೀಕೆಗಳನ್ನೂ ಮೀರಿ ಇತರ ಭಾಷೆಗಳಲ್ಲಿ ಬೆಳೆದಿದೆ.
ಕನ್ನಡದಲ್ಲೂ ಇಂತಹ ಗುರಿ ಮುಟ್ಟುವಂತಾಗಬೇಕು.
ಕನ್ನಡ ವಿಕಿಪೀಡಿಯ ಕನ್ನಡಿಗರಿಗೆ ದೊರೆತಿರುವ ಒಂದು ಸುವರ್ಣಾವಕಾಶ. ತಮ್ಮ ಶ್ರಮ ಮತ್ತು ಸಮಯ ದಾನ ಮಾಡಿ ಕನ್ನಡ ವಿಕಿಪೀಡಿಯ ಬೆಳೆಸಿದ ಮತ್ತು ಬೆಳೆಸುತ್ತಿರುವ ಕನ್ನಡಾಭಿಮಾನಿ ಮಿತ್ರರಿಗೆಲ್ಲ ನಾವು ಕೃತಜ್ಞರಾಗಿರಬೇಕು.
ಯಾವುದೇ ತಾಂತ್ರಿಕತೆ ಮತ್ತು ತಂತ್ರಾಂಶಧ ಬಗ್ಗೆ ಹೆಚ್ಚು ತಿಳಿಯುವ ಅವಶ್ಯಕತೆಯೇ ಇಲ್ಲದೆ ಅಂತರಾಷ್ಟ್ರೀಯ ಮಟ್ಟದಲ್ಲಿ ಒದಗಿರುವ ಈ ಅವಕಾಶವನ್ನು ಚೀನಿ ಮತ್ತು ಜಪಾನಿಯರಂತೆ ನಾವು ಬಳಸಿಕೊಂಡು ಮುಕ್ತ ಕನ್ನಡ ವಿಶ್ವಕೋಶ, ಮುಕ್ತ ಕನ್ನಡ ನಿಘಂಟು ಇತ್ಯಾದಿ ವಿಕಿಪೀಡಿಯಾ ಯೋಜನೆಗಳನ್ನು ಬೆಳೆಸುವುದರಲ್ಲಿ ಭಾಗಿಯಾಗಬೇಕು. ಹಾಗಲ್ಲದೆ ಮಾಹಿತಿ ಪುನರಾವರ್ತನೆ ಮಾಡಿ, ಎಲ್ಲರೂ ಬೇರೆ ಬೇರೆ ನೂರೆಂಟು ಕನ್ನಡ ಇಂಟರ್‌ನೆಟ್ ತಾಣಗಳನ್ನು ಆರಂಭಿಸಿ ಅವುಗಳನ್ನು ಕಾಲಕಾಲಕ್ಕೆ ಅಪ್‌ಡೇಟ್ ಮಾಡಲಾಗದೆ, ಹುಡುಕುವ ಯಂತ್ರಗಳ ಸೂಚಿಗಳಿಗೆ ಸೇರಿಸಿ ಒಳ್ಳೆಯ ರ್ಯಾಂಕ್ ಪಡೆಯಲಾಗದೆ ಇದ್ದರೆ ಏನು ಪ್ರಯೋಜನ? ಆಸಕ್ತರು ಕನ್ನಡ ವಿಕಿಪೀಡಿಯಾಗೆ ಲೇಖನ ಸೇರಿಸುವ ಮತ್ತು ಈಗಾಗಲೇ ಇರುವ ತಾಣಗಳಿಂದ ನೇರ ಸಂಪರ್ಕ ಕಲ್ಪಿಸುವ ಮೂಲಕ ಈ ಸಾಮೂಹಿಕ ಜಾಗತಿಕ ಮಾಹಿತಿ ಸಾಗರಕ್ಕೆ ತಮ್ಮ ಕಾಣಿಕೆ ಸಲ್ಲಿಸಿ ಇಂಟರ್‌ನೆಟ್‌ನಲ್ಲಿ ಕನ್ನಡದ ಸಂಪತ್ತನ್ನು ಕ್ರೋಡೀಕರಿಸಬೇಕು.
ನಮ್ಮ ಸಾವಿರಾರು ಲೇಖಕರು ಮತ್ತು ಭಾಷಾಂತರ ತಜ್ಞರು ತಮ್ಮ ಲೇಖನಗಳನ್ನು ವಿಕಿಪೀಡಿಯಾಕ್ಕೆ ಸೇರಿಸುವ ಮೂಲಕ ಮತ್ತು ಇಂಗ್ಲಿಷ್ ಲೇಖನಗಳನ್ನು ಭಾಷಾಂತರಿಸುವ ಮೂಲಕ ಕನ್ನಡ ಮುಕ್ತ ವಿಶ್ವಕೋಶವನ್ನು ಸಮೃದ್ಧ ಹಾಗೂ ಪರಿಪೂರ್ಣಗೊಳಿಸಿ ಜಾಗತಿಕ ಮಟ್ಟದಲ್ಲಿ ಕನ್ನಡಕ್ಕೆ ಒಳ್ಳೆಯ ಸ್ಥಾನವನ್ನು ಗಳಿಸುವುದರೊಂದಿಗೆ ಮಧ್ಯವರ್ತಿಗಳ ಹಾವಳಿಯಿಲ್ಲದೆ ವಿಶ್ವದಾದ್ಯಂತ ಕನ್ನಡ ಪರಾಮರ್ಶನ ಸೇವೆ ಇಂಟರ್‌ನೆಟ್‌ನಲ್ಲಿ ಪುಕ್ಕಟೆ ದೊರೆಯುವಂತೆ ಮಾಡಲು ನೆರವಾಗಬೇಕು.
ವಿಜ್ಞಾನಿಗಳು ಅಂತರರಾಷ್ಟ್ರೀಯ ಮಟ್ಟದಲ್ಲಿ ವಿಜ್ಞಾನ ಮತ್ತು ತಂತ್ರಜ್ಞಾನ ಲೇಖನಗಳ ಮುಕ್ತ ಆಗರವನ್ನು ಇಂಟರ್‌ನೆಟ್‌ನಲ್ಲಿ ಎಲ್ಲರಿಗೂ ದೊರಕಿಸಿಕೊಡುವ ದಿಟ್ಟ ಹೆಜ್ಜೆ

ಇಟ್ಟಿರುವಾಗ ಆಯಾ ಭಾಷೆಯ ಸಾಮಾನ್ಯರಿಗೆ ಬೇಕಿರುವ ದುಬಾರಿ ಬೆಲೆಯ ವಿಶ್ವಕೋಶ ಮತ್ತು ನಿಘಂಟುಗಳನ್ನು ಪ್ರಕಾಶಕರ/ ಸಂಸ್ಥೆಗಳ ಕಾಪಿರೈಟ್ ಬಿಗಿಮುಷ್ಠಿಯಿಂದ ಬಿಡಿಸಿ ಇಂಟರ್‌ನೆಟ್‌ನಲ್ಲಿ ಅಳವಡಿಸಬೇಡವೇ? ಹಲವಾರು ಸಂಸ್ಥೆಗಳು ತಮ್ಮ ಮುದ್ರಿತ ವಿಶ್ವಕೋಶ ಮತ್ತು ನಿಘಂಟುಗಳನ್ನು ಈಉ–ಖಕಂ ರೂಪದಲ್ಲಿ ಪ್ರಕಟಿಸುವ ವ್ಯರ್ಥ ಸಾಹಸಕ್ಕೆ ಕೈ ಹಾಕುವ ಬದಲು ಕನ್ನಡ ವಿಕಿಪೀಡಿಯ ಮತ್ತು ವಿಕ್ಷನರಿಗಳನ್ನು ಬಲಪಡಿಸಿದರೆ ಇಂಟರ್‌ನೆಟ್ ಮೂಲಕ ದೇಶ ಮತ್ತು ಸಮಯಾತೀತವಾಗಿ ಅತೀ ಹೆಚ್ಚು ಓದುಗರನ್ನು ತಲುಪಬಹುದಾಗಿದೆ. ಬಹುತ ೀಕ ಎಲ್ಲ ಶೋಧ ಯಂತ್ರಗಳು ವಿಕಿಪೀಡಿಯ ಮತ್ತು ವಿಕ್ಷನರಿಗಳಿಂದ ತಕ್ಷಣ ಮಾಹಿತಿ ಒದಗಿಸುತ್ತವೆ. ಕಂಪ್ಯೂಟರ್‌ನಲ್ಲಿ ಯಾವುದೇ ಕೆಲಸ ಮಾಡುವಾಗಲೂ ಒಂದು ಪದ ಅಥವ ಪದಗುಚ್ಛದ ಮೇಲೆ ಕ್ಲಿಕ್ ಮಾಡಿದರೆ, ಅದರ ಅರ್ಥ ಮತ್ತು ಸಂಬಂಧಪಟ್ಟ ಮಾಹಿತಿಯನ್ನು ತಟ್ಟನೆ ವಿಕಿಪೀಡಿಯದಿಂದ ತೆರೆದು ಒದಗಿಸುವ answers.com ನಂತಹ ಯಂತ್ರಗಳೂ ಇವೆ.

ನಮ್ಮಲ್ಲಿ ಪತ್ಯವಷ್ಟೆ ಅಲ್ಲದೆ ಕನ್ನಡ ಮತ್ತು ಕರ್ನಾಟಕದ ಹಲವಾರು ಮಹನೀಯರಿಗೆ ಸಂಬಂಧಿಸಿದ ಅಪರೂಪದ ಧ್ವನಿ ಮುದ್ರಿಕೆ, ಸ್ಥಿರ ಹಾಗೂ ವೀಡಿಯೊ ಚಿತ್ರ ಇತ ್ಯಾದಿಗಳಿಗೆ ಒಂದು ಸಮಗ್ರ ಸೂಚಿಯಿಲ್ಲ. ಅವು ಯಾರ (ಯಾವ ಸಂಸ್ಥೆ/ ಇಲಾಖೆ) ಬಳಿ ಇವೆ ಎಂಬುದು ತಿಳಿಯದೆ ಶ್ರೀಸಾಮಾನ್ಯರು ಅವುಗಳನ್ನು ವೀಕ್ಷಿಸುವುದು/ ಕೇಳುವುದು ಸಾಧ್ಯವಿಲ್ಲ. ಅವುಗಳಲ್ಲಿ ಕಾಪಿರೈಟ್‌ಗೆ ಒಳಪಡದ್ದನ್ನು ಹಾಗೂ ಕಾಪಿರೈಟ್ ಮುಕ್ತಗೊಳಿಸಬಹುದಾದ್ದನ್ನು ವಿಕಿಮೀಡಿಯಾ ಕಾಮನ್ಸ್‌ನಲ್ಲಿ ಸೇರಿಸಿ ಇಂಟರ್‌ನೆಟ್ ಮೂಲಕ ವಿಶ್ವಾದ್ಯಂತ ವೀಕ್ಷಿಸಲು/ ಕೇಳಲು ಸಾಧ್ಯವಾಗಿಸಬೇಕು. ಸುಪರ್ದುದಾರರು ಮೂಲ ಪ್ರತಿಯನ್ನ ಮುಚ್ಚಿ ಬಚ್ಚಿಟ್ಟುಕೊಳ್ಳಬಹುದು. ಇಂತಹ ದೃಶ್ಯ ಶ್ರವಣ ಮಾಧ್ಯಮಗಳನ್ನು ಸರಿಯಾಗಿ ಸಂರಕ್ಷಿಸಿ ಕಾಲಕಾಲಕ್ಕೆ ಪರಾಮರ್ಶಿ ಸದಿದ್ದರೆ ನಾಶವಾಗುವ ಸಾಧ್ಯತೆಗಳಿವೆ. ಸಂಸ್ಕೃತಿ ಸಂರಕ್ಷಣೆ ಹೊಣೆಹೊತ್ತ ಸಂಬ ಂಧಪಟ್ಟವರು ಈ ನಿಟ್ಟಿನಲ್ಲಿ ಚಿಂತಿಸಿ ಕಾರ್ಯೋನ್ಮುಖರಾಗಬೇಕಿದೆ. ಕೊನೆಯದಾಗಿ ಆದರೆ ಬಹುಮುಖ್ಯವಾಗಿ, ಸಾರ್ವಜನಿಕ ಗ್ರಂಥಾಲಯಗಳು ಮತ್ತು ಶಾಲಾ ಗ್ರಂಥ ಾಲಯಗಳು ದುಬಾರಿ ಪರಾಮರ್ಶನ ಗ್ರಂಥಗಳ ಸಗಟು ಖರೀದಿಯನ್ನು ನಿಲ್ಲಿಸಿ ಇಂಟರ್‌ನೆಟ್ ಸೌಲಭ್ಯ ಕಲ್ಪಿಸಿ, ಪುಕ್ಕಟೆ ಲಭ್ಯವಿರುವ ವಿಕಿಪೀಡಿಯಾದಂತಹ ನೂರಾರು ಪರಾಮರ್ಶನ ಗ್ರಂಥಗಳನ್ನು ಬಳಸುವ ಹವ್ಯಾಸವನ್ನು ಓದುಗರಲ್ಲಿ ಬೆಳೆಸಿ, ಜನಪ್ರಿಯಗೊಳಿಸಿದರೆ, ಕಂಪ್ಯೂಟರ್ ಅಕ್ಷರತೆ ಮತ್ತು ಇತರ ಇ–ಆಡಳಿತದ ಮಾಹಿತಿ ಪ್ರಸಾರ ಯೋಜನೆಗಳಿಗೂ ಒಟ್ಟಿಗೆ ನೆರವಾದಂತಾಗುತ್ತದೆ.

**Send this page to your friend**

**Newindpress - Indiavarta - Andhra Prabha - Dinamani - Malayalam Varikha - AP Weekly - Cinema Express - Tamilan Express**

This site is owned and managed by Express Network Private Ltd.
No part of this site should be used in any other media without prior permission.
e-mail: info@kannadaprabha.com